**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 858 |
| ಉತ್ತರಿಸುವ ದಿನಾಂಕ | 24-07-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಾವೇರಿ 2.00 ತಂತ್ರಾಂಶದಲ್ಲಿ ನೋಂದಣಿ ಮಾಡುವ ಸಮಯದಲ್ಲಿ ಹೆಚ್ಚು ಜನ ಹೊಂದಿದ ಕುಟುಂಬವಿದ್ದಲ್ಲಿ, ಅವರ ವಿವರ ಮತ್ತು ಫೋಟೋ ಅಪ್‌ಲೋಡ್ ಮಾಡಲು ಸಮಯ ಮುಗಿದರೆ ಲಾಗ್‌ಔಟ್ ಆಗುತ್ತಿದ್ದು, ಅನಂತರ ಹೊಸದಾಗಿ ಅಪ್ಲೋಡ್ ಮಾಡಬೇಕಾಗಿರುವುದರಿಂದ ನಿಗದಿಪಡಿಸಿದ ಸಮಯ ಮುಗಿದರೂ ಸಲ್ಲಿಸುತ್ತಿರುವ ಅರ್ಜಿಯನ್ನು ಮುಂದುವರೆಸುವ ಅವಕಾಶ ನೀಡಲಾಗುವುದೇ; | ಕಾವೇರಿ-2.0 ತಂತ್ರಾಂಶದಲ್ಲಿ ಸಿಟಿಜ಼ನ್ ಲಾಗಿನ್ ನಲ್ಲಿ ಸ್ವತ್ತು ಹಾಗೂ ಪಕ್ಷಕಾರರು ವಿವರವನ್ನು ನಮೂದಿಸಿ ಸಂಬಂಧಿಸಿದ ದಾಖಲೆಗಳನ್ನು ಅಪಲೋಡ್ ಮಾಡಿ ನೋಂದಣಿಗಾಗಿ ಸಲ್ಲಿಸಬೇಕಾಗಿರುತ್ತದೆ. ಈ ಸಮಯದಲ್ಲಿ ಪಕ್ಷಕಾರರ ಪೋಟೋ ಅಪಲೋಡ್ ಮಾಡುವ ಅವಶ್ಯಕತೆ ಇರುವುದಿಲ್ಲ.<br><br>ವಿವರಗಳ ನಮೂದು ಸಮಯದಲ್ಲಿ Session out ಆದಲ್ಲಿ ಮತ್ತೊಮ್ಮೆ ಲಾಗಿನ್ ಆಗಿ ಮುಂದುವರೆಯಬಹುದಾಗಿದೆ. ಹಿಂದೆ ನಮೂದಿಸಲಾದ ಮಾಹಿತಿ save ಆಗಿರುತ್ತದೆ ಮತ್ತು ಹೊಸದಾಗಿ ಮಾಹಿತಿಯನ್ನು ನಮೂದಿಸುವ ಅವಶ್ಯಕತೆ ಇರುವುದಿಲ್ಲ. |
| ಆ | ಸಿಟಿಜ಼ನ್ ಲಾಗಿನ್ ಅಸಮರ್ಪಕವಾಗಿದ್ದು, ಲಾಗಿನ್ ವಿಫಲವಾಗುತ್ತಿರುವುದರಿಂದ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮವೇನು; | ಸಿಟಿಜ಼ನ್ ಲಾಗಿನ್ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದರಲ್ಲಿ ಯಾವುದೇ ಸಮಸ್ಯೆಗಳಿರುವುದಿಲ್ಲ.<br><br>ತಪ್ಪಾದ ಪಾಸ್‌ವಾರ್ಡ್ ನಮೂದಿಸಿ ಲಾಗಿನ್ ವಿಫಲವಾದಲ್ಲಿ, ಪಾಸ್‌ವಾರ್ಡ್‌ನ್ನು Reset ಮಾಡಿ ಲಾಗಿನ್ ಆಗಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಇ | ಸಾರ್ವಜನಿಕರು ಸಕಾಲಕ್ಕೆ ಇ.ಸಿ. (ಋಣಭಾರ ಪ್ರಮಾಣ ಪತ್ರ) ಪಡೆಯಲು ಸಾಧ್ಯವಾಗದೆ, ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮವೇನು; | ಕಾವೇರಿ-2.0 ತಂತ್ರಾಂಶದಲ್ಲಿ ಋಣಭಾರ ಪ್ರಮಾಣ ಪತ್ರವನ್ನು ಪಡೆಯಲು ಪ್ರಸ್ತುತ ಯಾವುದೇ ತಾಂತ್ರಿಕ ಸಮಸ್ಯೆಗಳಿರುವುದಿಲ್ಲ.<br><br>ಕಾವೇರಿ-2.0 ತಂತ್ರಾಂಶದಲ್ಲಿ ನೀಡಲಾಗಿರುವ ಋಣಭಾರ ಪ್ರಮಾಣ ಪತ್ರಗಳ ವಿವರ ಈ ಕೆಳಕಂಡಂತಿದೆ. |

| ಅವಧಿ | ಸಲ್ಲಿಸಲಾದ ಇ.ಸಿ ಅರ್ಜಿಗಳ ಸಂಖ್ಯೆ | ವಿತರಿಸಲಾದ ಇ.ಸಿಗಳು | ಬಾಕಿ ಇರುವ ಅರ್ಜಿಗಳು |
|---|---|---|---|
| 01-06- | | | |

| | | | |
|---|---|---|---|
| 2023 ರಿಂದ 15-07-2024 | 35,69,159 | 35,64,863 | 4,296 |

| | | |
|---|---|---|
| | | ಅಲ್ಲದೆ ಗಣಕೀಕೃತ ನೋಂದಣೆಗೂ ಪೂರ್ವದಲ್ಲಿ ಅಂದರೆ 2004ಕ್ಕೂ ಮೊದಲು ನೋಂದಣಿಯಾಗಿರುವ ದಸ್ತಾವೇಜುಗಳಿಗೂ ಸಹ ಆನ್‌ಲೈನ್ ಮುಖಾಂತರ ಉಪನೋಂದಣಿ ಕಛೇರಿಗೆ ಭೇಟಿ ನೀಡದೆಯೇ ಋಣಭಾರ ಪ್ರಮಾಣಪತ್ರ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. |
| ಈ | ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಕಾವೇರಿ 2.00 ತಂತ್ರಾಂಶ ಅಪ್‌ಗ್ರೇಡ್ ಮಾಡಿದ ನಂತರ ಸಾರ್ವಜನಿಕರಿಗೆ ಹಲವು ರೀತಿಯ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕಾವೇರಿ-2.0 ತಂತ್ರಾಂಶದ ಅನುಷ್ಠಾನದಿಂದಾಗಿ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗಳು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಕಾವೇರಿ-2.0 ತಂತ್ರಾಂಶವು ನೂತನ ತಂತ್ರಾಂಶವಾಗಿದ್ದು, ಇದನ್ನು ಜೂನ್-2023 ರ ಅಂತ್ಯಕ್ಕೆ ರಾಜ್ಯದ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗಿರುತ್ತದೆ. ಈ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ದಸ್ತಾವೇಜಿನ ನೋಂದಣಿಗೆ ಸಂಬಂಧಿಸಿದ ಶೇ.90ರಷ್ಟು ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ತಂತ್ರಾಂಶದ ಕಾರ್ಯಾಚರಣೆಯಲ್ಲಿ ಸಾರ್ವಜನಿಕರ ಪಾತ್ರ ಹೆಚ್ಚಾಗಿರುವುದರಿಂದ ಪ್ರಾರಂಭದ ದಿನಗಳಲ್ಲಿ ತಂತ್ರಾಂಶವನ್ನು ಉಪಯೋಗಿಸುವಲ್ಲಿ ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳು ಕಂಡು ಬಂದಿದ್ದು, ಅವುಗಳನ್ನು ಕಾಲಕ್ರಮೇಣ ಪರಿಹರಿಸಲಾಗಿರುತ್ತದೆ.<br><br>ತಂತ್ರಾಂಶದ ಬಳಕೆಯಲ್ಲಿ ಸಾರ್ವಜನಿಕರು ಎದುರಿಸುವ ಸಮಸ್ಯೆ ಹಾಗೂ ಗೊಂದಲಗಳಿಗೆ ತಕ್ಷಣ ಪರಿಹಾರ ಒದಗಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>**1. ಸಹಾಯವಾಣಿ:** ನೂತನ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಲು ಸಕಾಲ ಕರೆ ಕೇಂದ್ರದ ಸಹಯೋಗದೊಂದಿಗೆ ಇಲಾಖೆಯ ಸಹಾಯವಾಣಿಯನ್ನು (080-68265316) ಪ್ರಾರಂಭಿಸಲಾಗಿರುತ್ತದೆ.<br><br>**2. ಟಿಕೇಟಿಂಗ್ ಟೂಲ್:** ಉಪನೋಂದಣಿ ಕಛೇರಿಯಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಟಿಕೇಟಿಂಗ್ ಟೂಲ್ ಒದಗಿಸಲಾಗಿದ್ದು, ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ |

ಸಮಸ್ಯೆಗಳನ್ನು ಕೂಡಲೇ ಸದರಿ ಟೂಲ್ ಮುಖಾಂತರ ಆನ್‌ಲೈನ್ ನಲ್ಲಿ ತಾಂತ್ರಿಕ ತಂಡಕ್ಕೆ ತಿಳಿಸಬಹುದಾಗಿದೆ.

**3. ಸರ್ವೀಸ್ ಡೆಸ್ಕ್:** ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಸಮಯದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಪರಿಹರಿಸಲು ಕೇಂದ್ರ ಕಛೇರಿಯಲ್ಲಿ 08 ತಾಂತ್ರಿಕ ಸಿಬ್ಬಂದಿಗಳನ್ನೊಳಗೊಂಡ ಸರ್ವೀಸ್ ಡೆಸ್ಕ್ ಸ್ಥಾಪಿಸಲಾಗಿರುತ್ತದೆ.

**4. ಅಪ್ಲಿಕೇಷನ್ ಸಪೋರ್ಟ್ ಇಂಜಿನಿಯರ್ ಹಾಗೂ ಸಿಸ್ಟಂ ಅಡ್ಮಿನ್:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿಸ್ಟಂ ಅಡ್ಮಿನ್ ಹಾಗೂ ಅಪ್ಲಿಕೇಷನ್ ಸಪೋರ್ಟ್ ಇಂಜಿನಿಯರ್‌ಗಳನ್ನು ನೇಮಿಸಲಾಗಿರುತ್ತದೆ. ಹಾರ್ಡವೇರ್‌ನಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಸಿಸ್ಟಂ ಅಡ್ಮಿನ್‌ಗಳು ಹಾಗೂ ತಂತ್ರಾಂಶದಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಅಪ್ಲಿಕೇಷನ್ ಸಪೋರ್ಟ್ ಇಂಜಿನಿಯರ್‌ಗಳು ಸಹಕರಿಸುತ್ತಿರುತ್ತಾರೆ.

**5. ಕಾವೇರಿ ಯೋಜನಾ ಉಸ್ತುವಾರಿ ಘಟಕ (KPUM):** ಕೇಂದ್ರ ಕಛೇರಿಯಲ್ಲಿ 05 ತಾಂತ್ರಿಕ ಸದಸ್ಯರನೊಳಗೊಂಡ ಕಾವೇರಿ ಯೋಜನಾ ಉಸ್ತುವಾರಿ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಈ ತಂಡವು ತಂತ್ರಾಂಶದ ಅಭಿವೃದ್ಧಿ ನಿರ್ವಹಣೆ ಮತ್ತು ಕಾರ್ಯಾಚರಣೆಯಲ್ಲಿ ಸೆಂಟರ್ ಫಾರ್ ಸ್ಮಾರ್ಟ್ ಗೌರನೆನ್ಸ್ ಸಂಸ್ಥೆಗೆ ಅಗತ್ಯ ತಾಂತ್ರಿಕ ಮಾಹಿತಿ ಒದಗಿಸುತ್ತಿದೆ.

**6. ಸಿಎಸ್‌ಜಿಯಲ್ಲಿನ L2 Support ವ್ಯವಸ್ಥೆ:** ತಂತ್ರಾಂಶದ ಅಭಿವೃದ್ಧಿಗಾರರಾದ ಸಿಎಸ್‌ಜಿ ಸಂಸ್ಥೆಯು ತಾಂತ್ರಿಕ ಸಮಸ್ಯೆಗಳ ಪರಿಹಾರಕ್ಕಾಗಿ 04 ತಾಂತ್ರಿಕ ಸಿಬ್ಬಂದಿಗಳ L2 Support ವ್ಯವಸ್ಥೆ ಒದಗಿಸಿರುತ್ತದೆ.

**7. ಯುಟ್ಯೂಬ್ ಚಾನಲ್:** ಕಾವೇರಿ ತಂತ್ರಾಂಶದಲ್ಲಿ ವಿವಿಧ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿಡಿಯೋ ಟುಟೋರಿಯಲ್‌ಗಳನ್ನು ಸಿದ್ಧಪಡಿಸಿ ಇಲಾಖೆಯ ಯುಟ್ಯೂಬ್ ಚಾನಲ್ ನಲ್ಲಿ ಒದಗಿಸಲಾಗಿರುತ್ತದೆ.

**8. ಪೋಸ್ಟರ್:** ಕಾವೇರಿ-2 ತಂತ್ರಾಂಶದ ಬಗ್ಗೆ ಮಾಹಿತಿಯನ್ನು ನೀಡಲು ರಾಜ್ಯದ ಎಲ್ಲಾ ನೋಂದಣಿ ಕಛೇರಿಗಳಲ್ಲಿ ಪ್ರದರ್ಶಿಸಲಾಗಿರುತ್ತದೆ.

**9.ತರಬೇತಿ:** i) ಅಧಿಕಾರಿ / ಸಿಬ್ಬಂದಿ : ಇಲಾಖೆಯ ಎಲ್ಲಾ

| | | |
|---|---|---|
| | | ಅಧಿಕಾರಿ /ಸಿಬ್ಬಂದಿಗಳಿಗೆ ಕೇಂದ್ರ ಕಛೇರಿಯ ಗಣಕೀಕರಣ ತರಬೇತಿ ಕೋಶದಲ್ಲಿ ಕಾವೇರಿ-2.0 ತಂತ್ರಾಂಶದ ತರಬೇತಿ ನೀಡಲಾಗಿರುತ್ತದೆ.<br>ii) ಸಾರ್ವಜನಿಕರು /ದಸ್ತಾವೇಜು ಬರಹಗಾರರು/ ವಕೀಲರು: ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿ ತಂತ್ರಾಂಶದ ಬಳಕೆ ಹಾಗೂ ತಂತ್ರಾಂಶದ ಮೂಲಕ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. |
| ಉ | ಅನಿರೀಕ್ಷಿತ ಕಾರಣಗಳಿಂದ ನೋಂದಣಿಯು ರದ್ದಾದಲ್ಲಿ ಪಾವತಿ ಮಾಡಿರುವ ನೋಂದಣಿ ಶುಲ್ಕವನ್ನು ಹಿಂಪಡೆಯಲು ಆಯ್ಕೆಯನ್ನು ನೀಡಲಾಗಿದೆಯೇ; ನೀಡದಿದ್ದಲ್ಲಿ, ಶುಲ್ಕ ಹಿಂಪಡೆಯುವ ಬಗೆ ಹೇಗೆ? | ಅನಿರೀಕ್ಷಿತ ಕಾರಣಗಳಿಂದಾಗಿ ದಸ್ತಾವೇಜು ನೋಂದಾಯಿಸದಿದ್ದಲ್ಲಿ ಹಾಗೂ ಅಂತಹ ಅರ್ಜಿಗಳಿಗೆ ಶುಲ್ಕವನ್ನು ಪಾವತಿಸಿದ್ದಲ್ಲಿ, ದಸ್ತಾವೇಜನ್ನು ನೋಂದಣಿಯಿಂದ ಹಿಂಪಡೆದು ಉಪನೋಂದಣಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಶುಲ್ಕಗಳ ಮರು ಪಾವತಿ ಪಡೆಯಬಹುದಾಗಿದೆ. |

ಕಂಇ/130/ಎಂಎನ್ಎಸ್ಎ/2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು